**<u>ದಿ:28.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

<u>ಪಾಟೀ ಸವಾಲು</u>**:-**ಪ್ರತಿವಾದಿ ನಂ:3 ರಿಂದ 7 ಪರ ಶ್ರೀ.B.S., ವಕೀಲರಿಂದ:-

ನಾನು ಮತ್ತು ವಾದಿ ನಂ:2 ಮತ್ತು 3 ಸೇರಿಕೊಂಡು ದಾವೆಗೆ ಮಾಹಿತಿ ನೀಡಿರುತ್ತೇವೆ. ನಮ್ಮ ತಂದೆಯ ತಂದೆಯ ಹೆಸರು ದೊಡ್ಡಪ್ಪ ಇರುತ್ತದೆ ಎಂದರೆ ಸರಿ. ಸದರಿ ದೊಡ್ಡಪ್ಪರವರಿಗೆ 04 ಜನ ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು ಇದ್ದರು. ಸದರಿ ಹೆಣ್ಣು ಮಕ್ಕಳ ಹೆಸರು ಗೌರಮ್ಮ ಮತ್ತು ಸಾಕಮ್ಮಇರುತ್ತದೆ. ಗೌರಮ್ಮರವರಿಗೆ 03 ಜನ ಗಂಡು ಮಕ್ಕಳು ಮತ್ತು 04 ಜನ ಹೆಣ್ಣು ಮಕ್ಕಳು ಇರುತ್ತಾರೆ. ಸದರಿರವರನ್ನು ಈ ದಾವೆಯಲ್ಲಿ ಪಕ್ಷಗಾರ ಮಾಡಿರುವುದಿಲ್ಲ ಎಂದರೆ ಸರಿ. ಸಾಕಮ್ಮರವರಿಗೆ ಒಬ್ಬನೇ ಗಂಡು ಮಗ ಬಸವರಾಜಪ್ಪ ಇರುತ್ತಾರೆ. ಅವರು ಈಗ ಮರಣ ಹೊಂದಿರುತ್ತಾರೆ. ಸದರಿ ಬಸವರಾಜಪ್ಪರವರ ಹೆಂಡತಿ ಹೆಸರು ಲಲಿತಮ್ಮ ಇರುತ್ತದೆ ಎಂದರೆ ಸರಿ. ಅವರಿಗೆ ರಾಜು, ನಾಗನಗೌಡ, ನಾಗರಾಜ ಮತ್ತು ಹೆಣ್ಣುಮಗಳು ಇರುತ್ತಾರೆ. ಸದರಿರವರನ್ನು ಈ ದಾವೆಯಲ್ಲಿ ಪಕ್ಷಗಾರ ಮಾಡಿರುವುದಿಲ್ಲ ಎಂದರೆ ಸರಿ. ವಾದಿಗಳು ನಮ್ಮ ಅಜ್ಜ ದೊಡ್ಡಪ್ಪರವರ 2 ನೇ ಮಗನಾದ ಬಸಪ್ಪರವರ ವಂಶಸ್ಥರು ಎಂದರೆ

ಸರಿ. ನಮ್ಮ ತಂದೆ ಬಸಪ್ಪರವರಿಗೆ ನಾನು, ವಾದಿ ನಂ:1 ಮತ್ತು 2 ಗಂಡು ಮಕ್ಕಳು ಮತ್ತು ಬಸಮ್ಮ, ಸೌಭಾಗ್ಯಮ್ಮ ಮತ್ತು ರತ್ನಮ್ಮ ಎಂಬ ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸರಿ. ನಾವು ಸದರಿ ಹೆಣ್ಣು ಮಕ್ಕಳನ್ನು ದಾವೆಗೆ ಸೇರಿಸಿರುವುದಿಲ್ಲ ಎಂದರೆ ಸರಿ. ನಮ್ಮ ಅಜ್ಜ ದೊಡ್ಡಪ್ಪರವರಿಗೆ ಸೇರಿದ ಒಟ್ಟು 50 ಎಕರೆ ಜಮೀನು ಇರುತ್ತದೆ. ಅಜ್ಜ ದೊಡ್ಡಪ್ಪರವರ ಮೊದಲನೆ ಮಗ ಸಂಗಪ್ಪರವರಿಗೆ 13 ಎಕರೆ ಜಮೀನು 1975 ರಲ್ಲಿ ಜುಬಾನಿ ಪಾರಿಕತ್ತು ಮೂಲಕ ಬಂದಿರುತ್ತದೆ ಎಂದರೆ ಸರಿ. ಸದರಿ ಜುಬಾನಿ ಪಾರಿಕತ್ತಿನ ಮೂಲಕ ನಮ್ಮ ತಂದೆ ಬಸಪ್ಪರವರಿಗೂ ಕೂಡ 21 ಎಕರೆ ಪಾಲು ವಿಭಾಗ ಬಂದಿರುತ್ತದೆ ಎಂದರೆ 12 ಎಕರೆ ಬಂದಿರುತ್ತದೆ ಉಳಿದ 07 ಎಕರೆಯನ್ನು ನಮ್ಮ ತಂದೆ ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸದರಿ 07 ಎಕರೆ ಜಮೀನು ಖರೀದಿ ಮಾಡಿರುವ ಬಗ್ಗೆ ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ನಾನು 21 ಎಕರೆ ಪಾಲು ಬಂದಿದ್ದರೂ ಸಹ ಖರೀದಿ ಮಾಡಿದ್ದಾಗಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜ ದೊಡ್ಡಪ್ಪರವರ 3 ನೇ ಮಗ ನಾಗಲಿಂಗಪ್ಪ ಇರುತ್ತಾರೆ ಎಂದರೆ ಸರಿ. ಅವರಿಗೆ ಪಾಲು ವಿಭಾಗದಿಂದ 12 ಎಕರೆ ಜಮೀನು ಬಂದಿರುತ್ತದೆ. ದಾವಾ ಆಸ್ತಿಯನ್ನು ಸೇರಿ ಒಟ್ಟು 12 ಎಕರೆ ನಾಗಲಿಂಗಪ್ಪರವರಿಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ದಾವಾ ಆಸ್ತಿ 30 ಗುಂಟೆ ಬಿಟ್ಟು ಬಂದಿರುತ್ತದೆ ಎಂದು ಹೇಳುತ್ತಾರೆ. ಸರ್ವೆ ನಂ:**1/1** ರ **04** ಎಕರೆ **04** ಗುಂಟೆ ನಾಗಲಿಂಗಪ್ಪರವರ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸಾಕ್ಷಿ ದಾವಾ ಆಸ್ತಿ ಸರ್ವೆ ನಂ:**1/6** ರ **30** ಗುಂಟೆ ಬಿಟ್ಟು ಹೋಗಿರುತ್ತದೆ ಎಂದು ಹೇಳುತ್ತಾರೆ. ದಾವಾ ಆಸ್ತಿಯು ಇದೂವರೆಗೆ ವಿಭಾಗ ಆಗಿರುವುದಿಲ್ಲ ಎಂದು ತೋರಿಸಲು ನಾನು ನ್ಯಾಯಾಲಯ **RR** ಮತ್ತು ಮ್ಯುಟೇಶನ್ ದಾಖಲೆ ನೀಡಿರುತ್ತೇನೆ. ದಾವಾ ಆಸ್ತಿಯು ಈ ಹಿಂದೆ ಸರ್ವೆ ನಂ:**1/1** ಇತ್ತು ಎಂದರೆ ಸರಿ. ಅದು ಮೂಲತಃ ಅಜ್ಜ ದೊಡ್ಡಪ್ಪ ತಂದೆ ಚನ್ನಪ್ಪಗೌಡ ಸೇರಿದ್ದು ಇರುತ್ತದೆ ಎಂದರೆ ಸರಿ. ಇದೂವರೆಗೂ ಕೂಡ ದಾವಾ ಆಸ್ತಿಯು ನನ್ನ ಅಜ್ಜ ದೊಡ್ಡಪ್ಪರವರ ಹೆಸರಿನಲ್ಲಿ ಇರುತ್ತದೆ ಎಂದು ನ್ಯಾಯಾಲಯಕ್ಕೆ ಪಹಣಿಗಳನ್ನು ಹಾಜರುಪಡಿಸಿರುತ್ತೇನೆ. ನಿಪಿ**1** ರಿಂದ **8** ಪಹಣಿಗಳು ಪ್ರತಿವಾದಿ

ನಂ:**7** ರವರ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿ. ನಿಪಿ**5** ಕೈ ಬರಹ ಪಹಣಿಯು ಪ್ರತಿವಾದಿ ನಂ:**7** ರವರ ತಂದೆ ನಾಗಲಿಂಗಪ್ಪರವರ ಹೆಸರಿಗೆ ಇರುತ್ತದೆ ಎಂದರೆ ಸರಿ.

ನನ್ನ ಅಜ್ಜ ದೊಡ್ಡಪ್ಪರವರ 4 ನೇ ಮಗ ಚನ್ನಬಸಪ್ಪರವರಿಗೆ 12 ಎಕರೆ ಜುಬಾನಿ ಪಾಲು ಪ್ರಕಾರ ಹೋಗಿರುತ್ತದೆ. ಪ್ರತಿವಾದಿ ನಂ:7 ರವರ ತಂದೆ ನಾಗಲಿಂಗಪ್ಪರವರು ಸರ್ವೆ ನಂ:1/1 ರಲ್ಲಿ ಮದ್ಯದ ಹಿಸ್ಸೆ ವಿಸ್ತೀರ್ಣ 02 ಎಕರೆಯನ್ನು ಎಂ.ಸಿ. ಬಸವರಾಜಪ್ಪ ಇವರಿಗೆ ಶುದ್ದ ಕ್ರಯ ಪತ್ರದ ಮೂಲಕ 2002 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿರವರನ್ನು ಈ ದಾವೆಯಲ್ಲಿ ಪಕ್ಷಗಾರ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರಿಗೂ ಮತ್ತು ದಾವಾ ಆಸ್ತಿಗೂ ಸಂಬಂದ ಇರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಮಾರಾಟ ಮಾಡಿದ ನಂತರ ಸರ್ವೆ ನಂ:1/1 ರಲ್ಲಿ ಉತ್ತರಕ್ಕೆ:01 ಎಕರೆ 14 ಗುಂಟೆ, ದಕ್ಷಿಣಕ್ಕೆ:30 ಗುಂಟೆ ಉಳಿದಿರುತ್ತದೆ ಎಂದರೆ ಸರಿ. ಸದರಿ ಮಾರಾಟ ನಂತರ ಸರ್ವೆ ನಂ:1/1 ಈಗ 1/6 ಎಂದುಪೋಡು ಆಗಿರುತ್ತದೆ ಎಂದರೆ ಸರಿ. ಸದರಿ ಎಂ.ಸಿ.ಬಸವರಾಜಪ್ಪರವರು ಖರೀದಿ ಮಾಡಿದ ಆಸ್ತಿಯು ಸರ್ವೆ ನಂ:1/5 ಎಂದು ಪೋಡು ಆಗಿರುತ್ತದೆ ಎಂದರೆ ಸರಿ. ಅದನ್ನು ನಾವು ತಕರಾರು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ದಾವಾ ಆಸ್ತಿ 30 ಗುಂಟೆ ಬಿಟ್ಟು ಮಾರಾಟಮಾಡಿರುತ್ತಾರೆ ಅದಕ್ಕೆ ನಾವು ತಕರಾರು ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯು ಪ್ರತಿವಾದಿ ನಂ:7 ರವರಿಗೆ ಸಂಬಂದಿಸಿದ ಆಸ್ತಿ ಇರುವ ಕಾರಣ ನಾನು ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯೂ ಸೇರಿ ಪ್ರತಿವಾದಿ ನಂ:7 ರವರು ಅವರಿಗೆ ಬಂದ ಪಾಲಿನ ಹಿಸ್ಸೆಯಲ್ಲಿ ಸ್ವಾಧೀನಾನುಭವ ಇರುತ್ತಾರೆ ಎಂದರೆ ಸರಿಯಲ್ಲ. ಈ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಮತ್ತು ಪ್ರತಿವಾದಿಗಳು ಇಲ್ಲಿಯವರೆಗೂ ಕೂಡ ಒಟ್ಟು ಕುಟುಂಬ ವಾಸವಾಗಿರುತ್ತೇವೆ ಎಂದು ತೋರಿಸಲು ನ್ಯಾಯಾಲಯ ವಂಶವೃಕ್ಷ ಹಾಜರುಪಡಿಸಿರುತ್ತೇನೆ. ನಾನು ಪ್ರತಿವಾದಿ ನಂ:7 ರವರು ಖಾತೆ ಮಾಡಿಸಿಕೊಂಡ ಬಗ್ಗೆ ಪ್ರಶ್ನಿಸಿ ಜಗಳೂರು ತಹಶಿಲ್ದಾರ್ ಇವರಿಗೆ ತಕರಾರನ್ನು ನೀಡಿರುತ್ತೇನೆ ಎಂದು ತಿಳಿಸಿರುವ ಹಾಗೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿ 30 ಗುಂಟೆ ಈಗಲೂ ಸಹ ಒಟ್ಟು ಕುಟುಂಬದಲ್ಲಿ ಇದೆ ಎಂದು

ತೋರಿಸಲು ದಾಖಲೆಗಳನ್ನು ಮಾಡಿಕೊಂಡಿರುವುದಿಲ್ಲ. ಸಾಕ್ಷಿ ಮುಂದುವರಿದು ಬಾಯಿ ಮಾತಿನಿಂದ ವಿಭಾಗ ಆಗಿರುತ್ತದೆ ಎಂದು ಹೇಳುತ್ತಾರೆ. ಪ್ರತಿವಾದಿ ನಂ:7 ರವರ ತಂದೆ ನಾಗಲಿಂಗಪ್ಪರವರಿಗೆ ದಾವಾ ಆಸ್ತಿ ಖಾತೆಯು ಯಾವ ವರ್ಷದಲ್ಲಿ ಆಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ನಾಗಲಿಂಗಪ್ಪರವರ ಹೆಸರಿಗೆ ಸುಮಾರು 45-50 ವರ್ಷದಿಂದ ಖಾತೆ ಇದ್ದು ಸ್ವಾದೀನಾನುಭವ ಇರುತ್ತಾರೆ ಎಂದರೆ ಸಾಕ್ಷಿ ಖಾತೆ ಅವರ ಹೆಸರಿಗೆ ಇದ್ದು ಆದರೆ ಸ್ವಾದೀನ ಎಲ್ಲರೂ ಅನುಭವಿಸುತ್ತಿದ್ದೇವೆ ಎಂದು ಹೇಳುತ್ತಾರೆ. ಸದರಿ ಖಾತೆಯನ್ನು ನಾವು ಇದೂವರೆಗೆ ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ಪ್ರತಿವಾದಿ ನಂ:7 ರವರ ತಂದೆಗೆ ಬಂದ ಪಾಲು ಆಸ್ತಿಯನ್ನು ಪ್ರತಿವಾದಿ ನಂ:3 ರಿಂದ 7 ರವರಿಂದ ಅಕ್ರಮವಾಗಿ ಪಡೆಯಲು ನಾವು ಮತ್ತು ಪ್ರತಿವಾದಿ ನಂ:8 ರಿಂದ 11 ಸೇರಿಕೊಂಡು ಈ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಅಜ್ಜ ದೊಡ್ಡಪ್ಪರವರ 4 ನೇ ಮಗ ಚನ್ನಬಸಪ್ಪರವರಿಗೆ ಬಸವಣ್ಣೇಮ್ಮ ಮತ್ತು ಲೋಲಾಕ್ಷಮ್ಮ ಎಂಬ ಹೆಣ್ಣು ಮಕ್ಕಳು ಇರುತ್ತಾರೆ. ಸದರಿರವರನ್ನು ಈ ದಾವೆಯಲ್ಲಿ ಪಕ್ಷಗಾರ ಮಾಡಲು ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿ ಅವರು ಮದುವೆ ಮಾಡಿಕೊಂಡು ಗಂಡನ ಮನೆಯಲ್ಲಿ ಇರುತ್ತಾರೆ ಎಂದು ಹೇಳುತ್ತಾರೆ. ನನ್ನ ಅಜ್ಜ ದೊಡ್ಡಪ್ಪರವರಿಗೆ ಸಂಬಂದಿಸಿದ ಹಾಗೇ ಒಟ್ಟು ಕುಟುಂಬದ ಆಸ್ತಿಗಳನ್ನು ಈ ದಾವೆಗೆ ಸೇರಿಸಿ ಪಾಲು ಮಾಡಿಕೊಳ್ಳಲು ತಕರಾರು ಇರುವುದಿಲ್ಲ ಎಂದರೆ ಸಾಕ್ಷಿ ದಾವಾ ಆಸ್ತಿಯನ್ನು ಬಿಟ್ಟು ಬೇರೆ ಆಸ್ತಿಗಳು ಈಗಾಗಲೇ ಪಾಲು ಆಗಿರುತ್ತವೆ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ನಾವು ಸ್ವಾಧೀನದಲ್ಲಿ ಇರುವುದಿಲ್ಲ ಪ್ರತಿವಾದಿ ನಂ:3 ರಿಂದ 7 ರವರಿಗೆ ಸೇರಿದ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ನಮಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ಅಣ್ಣರವರ ಸಮಾದಿ ದಾವಾ ಆಸ್ತಿಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಮಾದಿ ಇದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾವು ಇದೂವರೆಗೆ ದಾವಾ ಆಸ್ತಿಯನ್ನು ಸರ್ವೆ ಮಾಡಿಸಿರುವುದಿಲ್ಲ ಎಂದರೆ ಸರಿ. ನಾನು ನನ್ನ ವಿಚಾರಣೆಯಲ್ಲಿ ತಿಳಿಸಿರುವ 7.5 ಗುಂಟೆ ಚಕ್ಕುಬಂದಿ ತಪ್ಪು ಇರುತ್ತದೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:-**ಪ್ರತಿವಾದಿ ನಂ:**9** ರಿಂದ **11** ಪರ ಶ್ರೀ.**P.V.K.,** ವಕೀಲರಿಂದ:-

ದಾವಾ ಆಸ್ತಿ **30** ಗುಂಟೆ ಕಣದ ಜಾಗ ಇರುತ್ತದೆ ಎಂದರೆ ಸರಿ. ಇದು ಮೂಲತಃ ಪಿತ್ರಾರ್ಜಿತವಾಗಿ ವಾದಿ ಮತ್ತು ಪ್ರತಿವಾದಿಗಳ ಕುಟುಂಬಕ್ಕೆ ಬಂದಿರುತ್ತದೆ ಎಂದರೆ ಸರಿ. ನಾನು ಮತ್ತು ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ **7.5(**ಏಳೂವರೆ**)** ಗುಂಟೆ ಸಮವಾಗಿ **04** ಭಾಗ ಹಂಚಿಕೊಂಡು ಸ್ವಾಧೀನದಲ್ಲಿ ಇರುತ್ತೇವೆ ಎಂದರೆ ಸರಿ. ವಾದಿಯವರ ತಂದೆ-ತಾಯಿ ಮತ್ತು ಪ್ರತಿವಾದಿಯವರ ತಂದೆ-ತಾಯಿಯವರ ಸಮಾದಿಗಳನ್ನು ದಾವಾ ಆಸ್ತಿಯಲ್ಲಿ ಇರುತ್ತವೆ ಎಂದರೆ ಸರಿ. ನಮ್ಮ ಕುಟುಂಬದವರು ಸಮಾದಿಗಳಿಗೆ ಪೂಜೆ ಮಾಡುತ್ತೇವೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಕಟ್ಟಿಗೆ ಮತ್ತು ಕೃಷಿ ಉಪಕರಣಗಳನ್ನು ಸಂಗ್ರಹಿಸಿ ಇಟ್ಟಿರುತ್ತೇವೆ ಎಂದರೆ ಸರಿ. ಪ್ರತಿವಾದಿ ನಂ:3 ರಿಂದ 7 ರವರ 7.5 ಗುಂಟೆ ವಿಸ್ತೀರ್ಣದ ಜಮೀನಿನ ಪೂರ್ವಕ್ಕೆ:ಶೇಖರಪ್ಪ ಜಮೀನು ಇರುತ್ತದೆ ಎಂದರೆ ಸರಿ, ಪಶ್ಚಿಮಕ್ಕೆ:ರಸ್ತೆ ಮತ್ತು ಹೆಚ್.ಜಿ. ಮಂಜುನಾಥರವರ ಜಮೀನು ಇರುತ್ತದೆ ಎಂದರೆ ಸರಿ. ಉತ್ತರಕ್ಕೆ:ನಮ್ಮ ಕಣ ಇರುತ್ತದೆ ಎಂದರೆ ಸರಿ. ದಕ್ಷಿಣಕ್ಕೆ:ಪ್ರತಿವಾದಿ ನಂ:8 ರಿಂದ 11 ರವರ ಕಣ ಇರುತ್ತದೆ ಎಂದರೆ ಸರಿ. ಪ್ರತಿವಾದಿ ನಂ:8 ರಿಂದ 11 ರವರು ತಮಗೆ ಬಂದ ಪಾಲಿನ ಕಳೆದ 60-70 ವರ್ಷಗಳಿಂದ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ಪ್ರತಿವಾದಿ ನಂ:8 ರಿಂದ 11 ರವರ ಕಣದ ಚಕ್ಕುಬಂದಿ ಪೂರ್ವಕ್ಕೆ:ಶೇಖರಪ್ಪ ಜಮೀನು ಇರುತ್ತದೆ ಎಂದರೆ ಸರಿ, ಪಶ್ಚಿಮಕ್ಕೆ:ರಸ್ತೆ ಮತ್ತು ಹೆಚ್.ಜಿ. ಮಂಜುನಾಥರವರ ಜಮೀನು ಇರುತ್ತದೆ ಎಂದರೆ ಸರಿ. ಉತ್ತರಕ್ಕೆ:ಪ್ರತಿವಾದಿ ನಂ:1 ಮತ್ತು 2 ರವರ ಕಣ ಮತ್ತು ದಕ್ಷಿಣಕ್ಕೆ:ಪ್ರತಿವಾದಿ ನಂ:4 ರಿಂದ 7 ರವರ ಕಣ ಇರುತ್ತದೆ ಎಂದರೆ ಸರಿ. ಈ ವಿಚಾರ ಪ್ರತಿವಾದಿ ನಂ:4 ರಿಂದ 7 ರವರಿಗೆ ತಿಳಿದಿರುತ್ತದೆ ಎಂದರೆ ಸರಿ. ನನಗೆ ಪ್ರತಿವಾದಿ ನಂ:8 ರಿಂದ 11 ರವರಿಗೆ ನ್ಯಾಯಾಲಯದಿಂದ ಭಾಗಗಳು ನೀಡಿದರೆ ನನಗೆ ಅಭ್ಯಂತರ ಇರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆ:** ಇರುವುದಿಲ್ಲ.
**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸರಿ ಇದೆ

**sd**

**ಸಿವಿಲ್ ನ್ಯಾಯಾಧೀಶರು, ಜಗಳೂರು**